**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ**

ಸಿಸಿ.277/2016

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಪ್ರದೀಪ್ ಪೂಜಾರಿ | ಸಿಡಬ್ಲೂಃ **01** |
| ತಂದೆ/ಗಂಡನ ಹೆಸರು | ಃ | ಬಾಲಕೃಷ್ಣ ಪೂಜಾರಿ | ಪಿಡಬ್ಲೂಃ **01** |
| ವಯಸ್ಸು | ಃ | 38 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ಪೋಲೀಸ್ ಇನ್ಸ್‌ಪೆಕ್ಟರ್, ಲೋಕಾಯುಕ್ತ, ಕೋಲಾರ. | 10.04.2026 |
| ವಾಸ ಸ್ಥಳ | ಃ | ದೇವನಹಳ್ಳಿ | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನಾನು ಜೂನ್-**2015** ರಿಂದ ಜುಲೈ-**2018** ರವರೆಗೆ ನಾನು ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಸಿದ್ದೇನೆ.

**2.** ದಿಃ **23.08.2015** ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ **08.00** ಕ್ಕೆ ಕಂಬದಹಳ್ಳಿ ಗ್ರಾಮದ ಆರೋಪಿಯ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಬಾತ್ಮಿದಾರರಿಂದ ಬಂದಿರುತ್ತದೆ. ಸದರಿ ವಿಚಾರವನ್ನು ದೂರವಾಣಿ ಮೂಲಕ ಶಿಡ್ಲಘಟ್ಟ ವೃತ್ತ ನೀರಿಕ್ಷಕರವರಿಗೆ ಮೌಖಿಕವಾಗಿ ತಿಳಿಸಿರುತ್ತೇನೆ. ನಂತರ ಚಾ.ಸಾ.**2** ಮತ್ತು **3** ರವರನ್ನು ಪಂಚರನ್ನಾಗಿ ಬರ ಮಾಡಿಕೊಂಡು, ಠಾಣಾ ಸಿಬ್ಬಂದಿಯಾದ ಚಾ.ಸಾ.**4** ಮತ್ತು **5** ರವರೊಂದಿಗೆ ಠಾಣಾ ಜೀಪಿನಲ್ಲಿ ರಾತ್ರಿ **08.45** ಕ್ಕೆ ಸದರಿ ಗ್ರಾಮಕ್ಕೆ ಹೋಗಿ ಅಂಗಡಿ ಬಳಿ ಹೋದಾಗ ಒಬ್ಬ ಆ ಸಾಮಿ ಅಂಗಡಿಯಿಂದ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ಅಕ್ಕ ಪಕ್ಕದ ಮನೆಯವನ್ನು ವಿಚಾರಸಿದಾಗ ಓಡಿ ಹೋದವನು ಆರೋಪಿಯೆಂದು ತಿಳಿಸಿರುತ್ತಾರೆ.

**3.** ನಂತರ ಚಿಲ್ಲರೆ ಅಂಗಡಿಯನ್ನು ಚಾ.ಸಾ.**2** ಮತ್ತು **3** ರವರ ಸಮಕ್ಷಮ ಪರಿಶೀಲಿಸಿದಾಗ **90** ಎಂ ಎಲ್ ನ **10** ಬೆಂಗಳೂರು ಮಾಲ್ಟ್ ವಿಸ್ಕಿಯ ಪ್ಯಾಕೆಟುಗಳು ಮತ್ತು **90** ಎಂ ಎಲ್ ನ **25** ಹೈವೇ ಪೈನ್ ವಿಸ್ಕಿ ಮದ್ಯದ ಟೆಟ್ರ್ಯಾ ಪ್ಯಾಕ್ ಗಳು ಇದ್ದವು. ಇವುಗಳನ್ನು ಚಾ.ಸಾ.**2** ರಿಂದ **5** ರವರ ಸಮಕ್ಷಮ ಅಮಾನತ್ತು ಪಂಚನಾಮೆ ಜರುಗಿಸಿ ಅಮಾನತ್ತು ಪಡಿಸಿಕೊಂಡು, ಸದರಿ ಮದ್ಯದ ಟೆಟ್ರಾ

ಪ್ಯಾಕ್ಗಳನ್ನು **90** ಎಂ ಎಲ್ ನ **02** ಬೆಂಗಳೂರು ಮಾಲ್ಟ್ ವಿಸ್ಕಿಯ ಪ್ಯಾಕೆಟುಗಳು ಮತ್ತು **90** ಎಂ ಎಲ್ ನ **02** ಹೈವೇ ಫೈನ್ ವಿಸ್ಕಿ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪಡೆದು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ ಇಲಾಖಾ ಮೊಹರಿನಿಂದ ಮೊಹರು ಮಾಡಿರುತ್ತೇನೆ. ನಂತರ ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ.

(ಈ ಹಂತದಲ್ಲಿ ಕಡತದಲ್ಲಿ ಸ್ಥಳ ಮತ್ತು ಅಮಾನತ್ತು ಪಂಚನಾಮೆ ಲಭ್ಯವಿಲ್ಲದೇ ಇರುವುರಿಂದ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಶಿಡ್ಲಘಟ್ಟ.